

ಬಡವರಾದ್ದರಿಂದ ಪಲ್ಲಕ್ಕಿಯಲ್ಲಿ ಕುಳಿತೋ ಇಲ್ಲವೇ ಕುದುರೆಯ ಮೇಲೆ ಕುಳಿತೋ ಹೋಗಲು ಹಣ ಇಲ್ಲ. ತನ್ನ ತಂದೆತಾಯಿಗಳ ಬಯಕೆಯನ್ನು ಹೇಗಾದರೂ ಈಡೇರಿಸಬೇಕೆಂದು ಶ್ರವಣ ಕುಮಾರನು ನಿಶ್ಚಯಿಸಿದನು. ಉದ್ದನೆಯ ಒಂದು ಮರದ ಕೋಲನ್ನು ತೆಗೆದುಕೊಂಡನು. ಅದರ ಎರಡೂ ಬದಿಗಳಲ್ಲಿ ಬುಟ್ಟಿಗಳನ್ನು ಕಟ್ಟಿದನು. ಇದನ್ನು ಕಾವಡಿ ಎನ್ನುತ್ತಾರೆ. ಅವುಗಳ ಮೇಲೆ ಅಪ್ಪ ಅಮ್ಮ ಇಬ್ಬರನ್ನೂ ಕುಳ್ಳಿರಿಸಿದನು. ಅದನ್ನು ಹೊತ್ತುಕೊಂಡು ಅವರಿಗೆ ತೀರ್ಥಯಾತ್ರೆ ಮಾಡಿಸಿದನು. ಹೀಗೆ ತನ್ನ ತಂದೆತಾಯಿಗಳ ಆಶೆಯನ್ನು ಪೂರೈಸಿದನು.

"ಒಂದು ದಿನ ಕಾಡಿನಲ್ಲಿ ಬರುತ್ತಿರುವಾಗ ತಂದೆತಾಯಿಗಳಿಗೆ ಬಾಯಾರಿಕೆಯಾಯಿತು. ಅವರಿಗೆ ನೀರು ತರಲೆಂದು ಸಮೀಪದ ನದಿಗೆ ಹೋಗಿ ತಂಬಿಗೆಗೆ ನೀರು ತುಂಬಿಕೊಳ್ಳುತ್ತಿದ್ದನು. ಅದೇ ಸಮಯದಲ್ಲಿ ರಾಮನ ತಂದೆ ದಶರಥನು ಬೇಟೆ ಆಡಲು ಅಲ್ಲಿಗೆ ಬಂದಿದ್ದ. ಆ ಶಬ್ದ ಕೇಳಿದ ಅವನು, ಯಾವುದೋ ಪ್ರಾಣಿ ನೀರು ಕುಡಿಯುತ್ತಿದೆಯೆಂದು ಭಾವಿಸಿ, ಆ ದಿಕ್ಕಿನ ಕಡೆ ಬಾಣವನ್ನು ಬಿಟ್ಟ. ಶ್ರವಣಕುಮಾರನಿಗೆ ಬಾಣ ನೆಟ್ಟಿತು. ಅವನು ನೋವಿನಿಂದ ಕೂಗಿಕೊಂಡು ಪ್ರಾಣಬಿಟ್ಟ. ತಮ್ಮ ಪ್ರೀತಿಪಾತ್ರ ಮಗನ ಸಾವಿನಿಂದ ತಂದೆತಾಯಿಗಳಿಗೆ ದುಃಖವಾಯಿತು. ಅವರು ದಶರಥನಿಗೆ ಶಾಪ ಕೊಟ್ಟರು.

"ನೀವು ನಿಮ್ಮ ತಂದೆತಾಯಿಗಳನ್ನು 'ಅದು ಬೇಕು, ಇದು ಬೇಕು' ಎಂದು ಕಾಡುವಾಗ, ಶ್ರವಣಕುಮಾರನ ನೆನಪು ಮಾಡಿಕೊಳ್ಳಿರಿ. ಈ ರೀತಿ ಕಾಡುವುದು ಸ್ವಾರ್ಥ ಹಾಗೂ ಅಗೌರವದ ಲಕ್ಷಣ" ಎಂದರು ಕುಲಕರ್ಣಿ ಮಾಸ್ತರರು.

"ಹಾಗಾದರೆ, ನಮ್ಮ ತಂದೆತಾಯಿಯರಿಗೆ ಗೌರವ ತೋರಿಸುವುದು ಹೇಗೆ?" ಎಂದು ಜಯಣ್ಣ ಕೇಳಿದ. ಅದಕ್ಕೆ ಸೀತೆ ಎಂಬ ಹುಡುಗಿ ಹೀಗೆ ಉತ್ತರಿಸಿದಳು: "ನಮ್ಮ ತಂದೆತಾಯಿಯರು ನಮಗೆ ಏನನ್ನು ಕೊಡಲಿಲ್ಲ ಎಂದು ಗೊಣಗುವ ಬದಲು, ನಮಗೆ ಎಷ್ಟೆಲ್ಲ ನೀಡಿದ್ದಾರೆ ಎನ್ನುವುದನ್ನು ನಾವು ಚಿಂತಿಸಬೇಕು ಹಾಗೂ ಅವರು ಸಂತೋಷವಾಗಿರುವಂತೆ ನಾವು ಏನು ಮಾಡಬಹುದು ಎಂಬ ಬಗ್ಗೆ ಆಲೋಚಿಸಬೇಕು."

ಇದನ್ನು ಕೇಳಿ ಕುಲಕರ್ಣಿ ಮಾಸ್ತರರಿಗೆ ತುಂಬಾ ಸಂತೋಷವಾಯಿತು. ಸೀತೆಯ ಕಡೆ ನೋಡುತ್ತ, "ಭೇಷ್, ಚೆನ್ನಾಗಿ ಹೇಳಿದೆಯಮ್ಮ" ಎಂದರು.

ಧನಂಜಯ ಹೇಳಿದ, "ಸರ್, ಒಮ್ಮೊಮ್ಮೆ ನಮ್ಮ ತಂದೆತಾಯಿಗಳು ನಮ್ಮನ್ನು ಅರ್ಥ ಮಾಡಿಕೊಳ್ಳುವುದೇ ಇಲ್ಲ. ಚಿಕ್ಕ ಮಗುವಂತೆ ನೋಡುತ್ತಾರೆ." ಕುಲಕರ್ಣಿ ಅವನ ಮುಖವನ್ನೇ ದಿಟ್ಟಿಸಿ ನೋಡುತ್ತ, ಗಂಭೀರವಾಗಿ ಹೇಳಿದರು, "ಅದು ಸರಿಯೇ, ಆದರೆ ನೀನು ನಿನ್ನ ತಂದೆತಾಯಿಗಳನ್ನು ಅರ್ಥಮಾಡಿಕೊಳ್ಳಲು ಎಷ್ಟರಮಟ್ಟಿಗೆ ಪ್ರಯತ್ನಿಸಿದ್ದೀಯೆ? ಅವರು ನಿನ್ನನ್ನು ಬಹುವಾಗಿ ಪ್ರೀತಿಸುತ್ತಾರೆ. ನಿನ್ನ ಸಂತೋಷ, ಅಭಿವೃದ್ಧಿ ಮತ್ತು ಸುರಕ್ಷತೆಗಳಿಗಾಗಿ ಅವರು ಸದಾ ಕಾತರರಾಗಿರುತ್ತಾರೆ. ಆದ್ದರಿಂದಲೇ ಕೆಲವೊಮ್ಮೆ 'ಹಾಗೆ ಮಾಡಬೇಡ', 'ಹೀಗೆ ಮಾಡಬೇಡ' ಎಂದು ತಡೆಯುತ್ತಾರೆ. ಅದು ನಿನ್ನ ಒಳ್ಳೆಯದಕ್ಕೇ ಅಲ್ಲವೇ?" "ಹೌದು ಸರ್" ಎಂದು ಧನಂಜಯ ಒಪ್ಪಿಕೊಂಡ.

ಕುಲಕರ್ಣಿ ಮಾಸ್ತರರು ಮುಂದುವರಿಸಿದರು, "ನಿನ್ನ ತಂದೆತಾಯಿಗಳು ನಿನ್ನನ್ನು ನಿಯಂತ್ರಿಸುತ್ತಿರುವಾಗ ನಿನ್ನ ಒಳ್ಳೆಯದಕ್ಕೇ ಹಾಗೆ ಮಾಡುತ್ತಿದ್ದಾರೆ ಎಂದು ಅರ್ಥಮಾಡಿಕೊ. ಅವರು ನಿನಗಿಂತ ದೊಡ್ಡವರು. ನಿನಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎನ್ನುವುದು ನಿನಗಿಂತಲೂ ಹೆಚ್ಚಿಗೆ ಅವರಿಗೆ ತಿಳಿದಿದೆ. ಆದ್ದರಿಂದ ಜೀವನದಲ್ಲಿ ನಿನ್ನನ್ನು ಸುರಕ್ಷಿತವಾದ ಮತ್ತು ಶ್ರೇಯಸ್ಸಿನ ದಾರಿಯಲ್ಲಿ ನಡೆಸಲು ಅವರು ಯಾವಾಗಲೂ ಪ್ರಯತ್ನಪಡುತ್ತಿರುತ್ತಾರೆ. ನಿನ್ನ ತಂದೆತಾಯಿಗಳನ್ನು, ಗುರುಗಳನ್ನು ನೀನು ಜೀವನದಲ್ಲಿ ದಾರಿದೀಪಗಳೆಂದು ಒಪ್ಪಿಕೊಂಡರೆ, ಎಲ್ಲ ತೊಂದರೆಗಳಿಂದ ಪಾರಾಗಿ, ಯಶಸ್ಸು ಪಡೆಯುತ್ತೀಯೆ."

ಇನ್ನೇನು ಸಮಯವಾಗುತ್ತ ಬಂದಿದೆ. ಕುಲಕರ್ಣಿ ಮಾಸ್ತರರು ಎಲ್ಲ ಮಕ್ಕಳಿಗೂ ಉಪನಿಷತ್ತುಗಳಲ್ಲಿ ಬರುವ ಮಂತ್ರವನ್ನು ಹೇಳಿಕೊಟ್ಟು ಅದರ ಅರ್ಥವನ್ನು ವಿವರಿಸಿದರು, **"ಮಾತೃದೇವೋ ಭವ, ಪಿತೃದೇವೋ ಭವ" – ತಾಯಿಯನ್ನು ದೇವರಂತೆ ಕಾಣು, ತಂದೆಯನ್ನು ದೇವರಂತೆ ಕಾಣು.** ಈ ಮಂತ್ರವನ್ನೇ ಹೇಳಿಕೊಳ್ಳುತ್ತ ಮಕ್ಕಳೆಲ್ಲರೂ ತರಗತಿಯ ಹೊರಗಡೆ ಬಂದರು. ಇನ್ನು ಮುಂದಾದರೂ ತಂದೆತಾಯಿಗಳಿಗೆ ನೋವುಂಟಾಗದಂತೆ ನಡೆದುಕೊಳ್ಳಬೇಕು ಎಂದು ಮನಸ್ಸಿನಲ್ಲಿಯೇ ಅಂದುಕೊಂಡರು.


(ಆಧಾರ: *The Guiding Light,*
Pub: Ramakrishna Mission, Belur Math) ★

ಧಾರಾವಾಹಿ

# ಬನ್ನಿ, ಬೇಲೂರು ಮಠಕ್ಕೆ

## ಸ್ವಾಮಿ ಆಶುತೋಷಾನಂದ

*(ಹಿಂದಿನ ಸಂಚಿಕೆಯಿಂದ)*



ಸ್ವಾಮಿ ವಿವೇಕಾನಂದರ ಕೊಠಡಿ

**ನಾ**ವೀಗ ಸ್ವಾಮಿ ವಿವೇಕಾನಂದರ ಕೊಠಡಿಯನ್ನು ಇಣುಕಿ ನೋಡೋಣ. ಸ್ವಾಮೀಜಿಯವರ ಬಟ್ಟೆಗಳು, ಪಾದ ರಕ್ಷೆಗಳು ಮುಂತಾದವುಗಳನ್ನು ಇಲ್ಲಿ ರಕ್ಷಿಸಿಡಲಾಗಿದೆ. ಅವರು ಬಳಸುತ್ತಿದ್ದ ಬೆತ್ತಗಳು, ಪೇಟಗಳು ಇಲ್ಲಿರುವ ಎರಡು ಗಾಜಿನ ಬೀರುಗಳಲ್ಲಿವೆ. ಹಾಗೆಯೇ ಅವರು ಉಪಯೋಗಿಸಿದ್ದ ತಬಲ, ತಂಬೂರಿ ಮತ್ತಿತರ ಸಂಗೀತವಾದ್ಯಗಳನ್ನೂ ಇರಿಸಲಾಗಿದೆ. ಈ ಕೊಠಡಿಯಲ್ಲಿ ಕಾಣುವ ದೊಡ್ಡದೊಂದು ಮಂಚ, ಅವರ ಪಾಶ್ಚಾತ್ಯ ಶಿಷ್ಯರು ಅವರಿಗೆ ಬಳುವಳಿಯಾಗಿ ಕೊಟ್ಟದ್ದು. ಆದರೆ ಅವರು ಅದನ್ನು ಅಷ್ಟಾಗಿ ಉಪಯೋಗಿಸುತ್ತಲೇ ಇರಲಿಲ್ಲ. ಅದರ ಪಕ್ಕದಲ್ಲಿಯೇ ಇರುವ ಸಣ್ಣ ಕ್ಯಾನ್‌ವಾಸ್ ಮಂಚದ ಮೇಲೆಯೇ ಅವರು ಮಲಗುತ್ತಿದ್ದರು ಅಥವಾ ನೆಲದ ಮೇಲೆ ಒಂದು ಚಾಪೆ ಹಾಸಿಕೊಂಡು ಮಲಗಿಕೊಳ್ಳುತ್ತಿದ್ದರು.

ಈ ಕೊಠಡಿಯ ಪೂರ್ವದಿಕ್ಕಿನಲ್ಲಿ ಒಂದು ಮೇಜು ಮತ್ತು ಕುರ್ಚಿ ಇವೆ. ಮೇಜಿನ ಮೇಲೆ ಒಂದು ಮರದ ವೇದಿಕೆಯ ಮೇಲೆ ಶ್ರೀರಾಮಕೃಷ್ಣರ ಚಿತ್ರವಿದೆ. ಆ ಛಾಯಾಚಿತ್ರದ ಬದಿಯಲ್ಲಿಯೇ ಪರಿವ್ರಾಜಕ ವೇಷದಲ್ಲಿರುವ ಸ್ವಾಮೀಜಿಯ ಸ್ಫಟಿಕದ ಚಿಕ್ಕ ಮೂರ್ತಿ ಇದೆ. ಅದು ಓವಲ್ ಆಕೃತಿಯಲ್ಲಿದೆ. ಈ ಮೂರ್ತಿಯಲ್ಲಿ ಸ್ವಾಮೀಜಿಯನ್ನು ಮಹಾದೇವ ಶಿವನೆಂದು ಬಿಂಬಿಸಲಾಗಿದೆ. ಅದಕ್ಕೆಂದೇ ಶಿವನ ವಾಹನವಾದ ನಂದಿಯನ್ನು ಅವರ ಮುಂದುಗಡೆ ತೋರಿಸಲಾಗಿದೆ. ಸ್ವಾಮೀಜಿಯ ನಿಕಟವರ್ತಿಯಾದ ಜೋಸೆಫಿನ್ ಮ್ಯಾಕ್‌ಲೌಡ್ ೧೯೧೭ ರಲ್ಲಿ ಇದನ್ನು ಮಾಡಿಸಿದಳು. ಇದರ ಹಲವಾರು ಪ್ರತಿಕೃತಿಗಳನ್ನು ಮಾಡಿಸಿ ಅವಳೇ ಹೇಳಿಕೊಳ್ಳುವಂತೆ, 'ಒಂದು ಬಗೆಯ ಸಂದರ್ಶನ ಚೀಟಿ' ಯಂತೆ (visiting card) ಸಂತೋಷದಿಂದ ಜನರಿಗೆ ಹಂಚಿದಳು. ಸ್ಫಟಿಕವೇ ಏಕೆ? ಅದಕ್ಕೆ ಅವಳ ಒಳನೋಟದ ಉತ್ತರ ಹೀಗಿತ್ತು: "ಸ್ಫಟಿಕವನ್ನು ಬಿಟ್ಟು ಮತ್ತಾವುದೂ ಸ್ವಾಮೀಜಿಯನ್ನು ಪ್ರತಿನಿಧಿಸಲಾಗದು."

ಸ್ವಾಮೀಜಿ ತಮ್ಮ ಕೊಠಡಿಯನ್ನು ಬಹಳವಾಗಿ ಇಷ್ಟಪಡುತ್ತಿದ್ದರು. ತಾವು ಮಾಡುತ್ತಿದ್ದ ಪ್ರಯಾಣಗಳ ನಂತರ, ಕೊಲ್ಕತಾಗೆ ನೀಡಿದ ಸಣ್ಣ ಭೇಟಿಯಾದ ಮೇಲೂ, ಮತ್ತೆ ಇಲ್ಲಿಗೆ ಬಂದಿರುವುದಕ್ಕೆ ಸಂತೋಷಪಡುತ್ತಿದ್ದರು. ಇಲ್ಲಿ ತಮ್ಮ ಬರವಣಿಗೆಯ ಕಾರ್ಯವನ್ನು ಮಾಡುತ್ತಿದ್ದರು, ತಮ್ಮ ಸಹೋದರ ಸಂನ್ಯಾಸಿಗಳು ಮತ್ತು ಶಿಷ್ಯರಿಗೆ ಆದೇಶಗಳನ್ನು ನೀಡುತ್ತಿದ್ದರು, ತಮ್ಮ ಸ್ನೇಹಿತರನ್ನು ಬರಮಾಡಿಕೊಳ್ಳುತ್ತಿದ್ದರು, ಊಟ ಮಾಡುತ್ತಿದ್ದರು, ಮಲಗುತ್ತಿದ್ದರು ಮತ್ತು ಭಗವಂತನೊಡನೆ ಏಕಾತ್ಮಭಾವವನ್ನು ಹೊಂದುತ್ತಿದ್ದರು. ಇದೇ ಕೊಠಡಿಯಲ್ಲಿಯೇ ಅಂತಿಮ ಧ್ಯಾನದಲ್ಲಿ ದೇಹತ್ಯಾಗವನ್ನೂ ಮಾಡಿಬಿಟ್ಟರು. ಈ ಕೊಠಡಿಯಲ್ಲಿ ಕುಳಿತುಕೊಂಡು ಅವರು ಬರೆದ ಕೆಲವು ಪತ್ರಗಳ ತುಣುಕುಗಳು ಇಲ್ಲಿವೆ:

"..ಈಗ ಗಂಗಾ ನದೀತೀರದ ಮಠದಲ್ಲಿರುವ ನನ್ನ ಕೋಣೆಯಲ್ಲಿ ಕುಳಿತು ಬರೆಯುತ್ತಿದ್ದೇನೆ. ಇದೆಷ್ಟು ಮೌನವಾಗಿ ನಿಶ್ಚಲವಾಗಿದೆ! ವಿಶಾಲವಾದ ನದಿಯು ಉಜ್ವಲವಾದ ರವಿಕಿರಣಗಳೊಂದಿಗೆ ನರ್ತಿಸುತ್ತಿದೆ. ಕೇವಲ ಒಮ್ಮೊಮ್ಮೆ ಇಲ್ಲಿಗೆ ಬರುವ ಸಾಮಾನು ತರುವ ದೋಣಿಗಳು ತಮ್ಮ ಹುಟ್ಟುಹಾಕುವಿಕೆಯಿಂದ ಈ ಮೌನವನ್ನು ಭಂಗಿಸುತ್ತವೆ. ಇಲ್ಲಿ ಈಗ ಚಳಿಗಾಲ. ಆದರೆ ಮಧ್ಯಾಹ್ನದ ಹೊತ್ತು ಪ್ರತಿದಿನವೂ ಶಾಖವಾಗಿ ಪ್ರಕಾಶಮಾನವಾಗಿರುತ್ತದೆ... ಎಲ್ಲೆಡೆಯೂ ಹಸಿರು ಹೊಂಬಣ್ಣಗಳಿಂದ ಕೂಡಿದೆ. ಹುಲ್ಲು ಮುಟ್ಟುವುದಕ್ಕೆ ಮಕಮಲ್ಲಿನ ಬಟ್ಟೆಯಂತಿದೆ. ಆದರೂ ಗಾಳಿ ಶೀತಲವಾಗಿ, ತೇವಾಂಶವಿಲ್ಲದೆ ಆಹ್ಲಾದಕರವಾಗಿದೆ."

(ನಿವೇದಿತಾಗೆ ಬರೆದ ಪತ್ರ, ದಿನಾಂಕ: ೧೯.೧೨.೧೯೦೦)

"...ಇನ್ನೂ ಚಂದ್ರೋದಯವಾಗಿಲ್ಲ. ಆದರೆ ನದಿಯ ಮೇಲೆ ಸೂರ್ಯನಿಲ್ಲದ ಕಾಂತಿ ಇದೆ. ಗಂಗಾನದಿ (ಮಳೆಯಿಂದಾಗಿ ತುಂಬಿ ಹರಿಯುತ್ತಿರುವಳು) ಮನೆಯ ಗೋಡೆಗಳಿಗೆ ಅಪ್ಪಳಿಸುತ್ತಿದೆ. ಅಸಂಖ್ಯಾತ ಪುಟ್ಟ ಪುಟ್ಟ ದೋಣಿಗಳು ಕತ್ತಲಲ್ಲಿ ಹೋಗುತ್ತ ಬರುತ್ತ ಇವೆ. ಆ ಕಾಲದಲ್ಲಿ ನದಿಗೆ ಬರುವ ಒಂದು ಬಗೆಯ ಮೀನನ್ನು ಹಿಡಿಯಲು ಅವು ಬಂದಿರುವುವು...